# ಹೀಗೊಂದು ಪತ್ರ

ಪೂಜ್ಯರೇ,

ತಮ್ಮ ಮಹಾನ್ ಸಂಸ್ಥೆಯು ಪ್ರಕಟಿಸುತ್ತಿರುವ ಕನ್ನಡ ಮಾಸಪತ್ರಿಕೆಯಾದ "ವಿವೇಕಪ್ರಭ"ವನ್ನು ಭಕ್ತ್ಯಾದರಗಳಿಂದ ಕನ್ನಡನಾಡಿನ ಜನರಾದ ನಾವು ಬರಮಾಡಿಕೊಳ್ಳುತ್ತಿದ್ದೇವೆ. ಅತ್ಯುತ್ತಮ ಮಟ್ಟದ ಮುದ್ರಣದ, ಆಕರ್ಷಕ ವರ್ಣವಿನ್ಯಾಸವನ್ನೊಳಗೊಂಡ ಪತ್ರಿಕೆಯನ್ನು ಅತಿ ಕಡಿಮೆಯಲ್ಲಿ ಒದಗಿಸುತ್ತಿರುವ ನಿಮಗೂ, ನಿಮ್ಮ ಲೇಖಕಬಾಂಧವರಿಗೂ ನಮ್ಮ ಹೃದಯಪೂರ್ವಕ ವಂದನೆಗಳು.

ಈ ಪತ್ರಿಕೆಯು ಪ್ರಕಟಿಸುತ್ತಿರುವ ನಮ್ಮೆಲ್ಲರ ಮೆಚ್ಚಿನ ಆಧ್ಯಾತ್ಮಿಕ ವಿಷಯಗಳು, ಅದರಲ್ಲೂ ಪೂಜ್ಯ ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆಯವರು ಮತ್ತು ಸ್ವಾಮಿ ವಿವೇಕಾನಂದರ ಜೀವನ, ದೈವಸಾಕ್ಷಾತ್ಕಾರದ ಅನುಭವಗಳು ಮತ್ತು ಬೋಧನೆಗಳು ನಮ್ಮ ಆಧ್ಯಾತ್ಮಿಕ ಸಾಧನೆಯನ್ನು ಮುಂದುವರಿಸಲು ದಾರಿದೀಪವಾಗಿವೆ.

ಸಂಪಾದಕೀಯದ ಬಗ್ಗೆ ಎರಡು ಮಾತು ಹೇಳಲೇಬೇಕಾಗಿದೆ. ಪ್ರತಿ ತಿಂಗಳು ಈ ವಿಶೇಷಭಾಗವನ್ನು ಅತ್ಯಂತ ಕಾತುರದಿಂದ ಎದುರು ನೋಡುವಂತಿರುತ್ತದೆ. ಈ ಲೇಖನಗಳಲ್ಲಿ ಸಾಮಾನ್ಯರಿಗೆ ಆಘ್ರಾಣಿಸಲು ಕಷ್ಟಕರವೆನಿಸುವ ಆಧ್ಯಾತ್ಮಿಕ ವಿಷಯಗಳು ಇದ್ದರೂ, ಅಂಥವನ್ನು ಸುಂದರವಾದ ಶೈಲಿಯಲ್ಲಿ, ನಮಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಿಕೊಡುತ್ತಾ, ನಮ್ಮ ಆಧ್ಯಾತ್ಮಿಕ ತೃಷ್ಣೆಯನ್ನು ಹಿಂಗಿಸುತ್ತಿದ್ದೀರಿ. ಇದಕ್ಕೆ ಕರ್ನಾಟಕದ ಜನತೆಯ ಪರವಾಗಿ ತಮಗೆ ಹೃದಯಪೂರ್ವಕ ಅಭಿನಂದನೆಗಳು.

ಭಗವಂತನ ಸಾಕ್ಷಾತ್ಕಾರವೇ ಎಲ್ಲ ಮಾನವ ಜೀವಿಗಳ ಮುಖ್ಯಧ್ಯೇಯವೆಂಬ ವಿಚಾರವನ್ನೂ, ಅದನ್ನು ಬೇರೆ ಬೇರೆ ರೀತಿಗಳಲ್ಲಿ ಪಡೆಯುವುದು ಹೇಗೆ ಎಂಬುದನ್ನೂ ಸಾಧಕರ, ಸದ್ಭಕ್ತರ ಜೀವನದ ಅನುಭವಗಳ ಮೂಲಕ ತಮ್ಮ ಪತ್ರಿಕೆಯು ಓದುಗರ ಮುಂದಿಡುತ್ತಿದೆ. ತನ್ಮೂಲಕ ನಮ್ಮ ಆಧ್ಯಾತ್ಮಿಕ ಜೀವನವನ್ನು ಉತ್ತಮಗೊಳಿಸಿಕೊಳ್ಳಲು ತಮ್ಮ ಪತ್ರಿಕೆಯಿಂದ ಬಹಳ ಸಹಾಯಕವಾಗುತ್ತಿದೆ.

ನಿಮ್ಮ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ ಸ್ಥಿರಶೀರ್ಷಿಕೆಗಳು ಮತ್ತು ವಿಶೇಷ ಶೀರ್ಷಿಕೆಗಳು ಅತ್ಯುತ್ತಮ ಮಾರ್ಗದರ್ಶನ ನೀಡುತ್ತಿವೆ. ಇವುಗಳಲ್ಲಿ ಕೆಲವನ್ನು ಉದಾಹರಿಸುವುದಾದರೆ ಹಿರಿಯ ಸ್ವಾಮೀಜಿಗಳಾದ ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ, ಸ್ವಾಮಿ ಸೋಮನಾಥಾನಂದಜಿ, ಸ್ವಾಮಿ ಹರ್ಷಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ನಿತ್ಯಸ್ಥಾನಂದಜಿ ಇನ್ನೂ ಅನೇಕರ ಜೊತೆಗೆ, ಯುವ ಸಂನ್ಯಾಸಿ ತಂಡದಲ್ಲಿ ಸ್ವಾಮಿ ಕರುಣಾಕರಾನಂದಜಿ, ಸ್ವಾಮಿ ಶಿವಕಾಂತಾನಂದಜಿ ಮುಂತಾದವರು ತಮ್ಮ ಲೇಖನಿಯ ಮೂಲಕ ಅಧ್ಯಾತ್ಮಕ್ಕೆ ಅಡಿ ಇಡುತ್ತಿರುವ ಸಾಮಾನ್ಯಜನರಲ್ಲಿ ಹೊಸಚೈತನ್ಯ ತುಂಬಿ, ಅವರನ್ನು ಪುನೀತಗೊಳಿಸುವಲ್ಲಿ ಯಶಸ್ವಿಗಳಾಗುತ್ತಿದ್ದಾರೆ. ನಿಮ್ಮ ಪತ್ರಿಕೆಯಲ್ಲಿ ಬರುವ ಲೇಖನಗಳ ಭಾಷೆ, ನಿರೂಪಣೆ ಮತ್ತು ಸಾಹಿತ್ಯ ಎಲ್ಲವೂ ಅತ್ಯುತ್ತಮವಾಗಿದ್ದು ನಮ್ಮಂತಹ ಸಾಮಾನ್ಯ ಓದುಗರಿಗೆ ಅವುಗಳ ಬಗ್ಗೆ ವಿಶ್ಲೇಷಿಸಲು ಹೆಚ್ಚಿಗೆ ಏನೂ ಉಳಿದಿಲ್ಲ ಎನಿಸುತ್ತದೆ.

ತಮ್ಮ ಕ್ಷಮೆಯನ್ನು ಕೋರಿ ಎರಡು ವಿಷಯಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ. ಪತ್ರಿಕೆಯ ಒಟ್ಟಾರೆ ಗುಣಮಟ್ಟ ಅತ್ಯುತ್ತಮವಾಗಿದ್ದರೂ, ಪತ್ರಿಕೆಯ ಕೊನೆಯ ಭಾಗಗಳಲ್ಲಿ ಪ್ರಕಟವಾಗುತ್ತಿರುವ 'ಕಾರ್ಟೂನ್' ಮಾದರಿಯ ಸೀರಿಯಲ್‌ಗಳು ಮತ್ತು ನಮ್ಮ ಪರಂಪರೆಯ ಬಗೆಗಿನ ವಿಷಯಗಳ ಗುಣಮಟ್ಟ, ಬೇರೆ ಆಧ್ಯಾತ್ಮ ವಿಷಯಗಳಿಗೆ ಹೋಲಿಸಿದರೆ ಕಡಿಮೆ ಏನೋ ಅನಿಸುತ್ತಿದೆ. ಆದುದರಿಂದ ಈ ಶೀರ್ಷಿಕೆಗಳ ಗುಣಮಟ್ಟವನ್ನು ಉತ್ತಮಗೊಳಿಸಲು ಅಥವಾ ಅವುಗಳನ್ನು ಕೈಬಿಡುವ ನಿರ್ಧಾರವನ್ನು ಕೈಗೊಂಡರೆ ಪತ್ರಿಕೆಯ ದೃಷ್ಟಿಯಿಂದ ಒಳ್ಳೆಯದೆನಿಸುತ್ತದೆ.

ನಮ್ಮ ವೇದಗಳು, ಉಪನಿಷತ್ತುಗಳು, ಶ್ರುತಿ, ಸ್ಮೃತಿ, ಭಾಗವತ, ಭಗವದ್ಗೀತೆ, ಮಹಾಭಾರತ, ರಾಮಾಯಣ ಮುಂತಾದುವುಗಳಲ್ಲಿ ಅನೇಕ ಆಧ್ಯಾತ್ಮಿಕ ವಿಷಯಗಳಿದ್ದು, ಅವುಗಳ ಪ್ರಕಟಣೆಗೆ ನಿಮ್ಮ ಪತ್ರಿಕೆಯೇ ಸೂಕ್ತ ವೇದಿಕೆ ಆಗಬೇಕಾಗಿರುವುದರಿಂದ, ಇಂದಿನ ನಿಮ್ಮ ಪತ್ರಿಕೆಯ 'ಮಾಸಿಕ' ರೂಪವನ್ನು 'ಪಾಕ್ಷಿಕ'ಕ್ಕೆ ರೂಪಾಂತರಗೊಳಿಸಿದರೆ ಸೂಕ್ತವೆನಿಸುತ್ತದೆ.

ಈ ಮೇಲೆ ಸೂಚಿಸಿರುವ ಎಲ್ಲಾ ಮಹದ್ಗ್ರಂಥಗಳು ದೇವಭಾಷೆ ಸಂಸ್ಕೃತದಲ್ಲಿಯೇ ರಚಿತವಾಗಿದ್ದು, ಸಾಮಾನ್ಯ ಜನರಿಗೆ ಆ ಭಾಷೆಯನ್ನು ಕಲಿಯುವ ಸುಯೋಗವಿರದೆ ಬಹಳ ತೊಂದರೆಗೆ ಒಳಗಾಗಿದ್ದಾರೆ. ಆದುದರಿಂದ ಈ ದೇವಭಾಷೆಯನ್ನು ತಮ್ಮ ಓದುಗರಿಗೆ ಕಲಿಸುವ ದೃಷ್ಟಿಯಿಂದ ಕ್ರಮಕೈಗೊಂಡರೆ ಮಹದುಪಕಾರವಾಗುತ್ತದೆ.

ಇಂದಿನ ಪರಿಸ್ಥಿತಿಯಲ್ಲಿ ಕಾಗದ, ಮುದ್ರಣ ಮತ್ತು ನಿರ್ವಹಣೆ ಖರ್ಚುಗಳು ಹೆಚ್ಚಾಗುತ್ತಿರುವುದರಿಂದ ನಿಮ್ಮ ಪತ್ರಿಕೆಯ ಬೆಲೆಯನ್ನು ಕನಿಷ್ಠ ರೂ. ೨೦/– ಕ್ಕಾದರೂ ಏರಿಸಿದರೆ ಒಳಿತು ಎಂಬ ಸಲಹೆ, ಸೂಚನೆ ನನ್ನ ಸ್ನೇಹಿತರದ್ದೂ ಆಗಿದೆ. ಇದಕ್ಕೆ ಬುದ್ಧಿವಂತರಾದ ಎಲ್ಲ ಕನ್ನಡ ಓದುಗರ ಒಪ್ಪಿಗೆ ಇರುತ್ತದೆಂಬ ನಂಬಿಕೆ ಇದೆ.

– ಬಿ. ಆರ್. ಸತ್ಯನಾರಾಯಣ, ಬೆಂಗಳೂರು